ಕರ್ನಾಟಕ ಸರ್ಕಾರ

ಉಪತಹಶೀಲ್ದಾರರವರ ನ್ಯಾಯಾಲಯ

ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

ಸಂ/ಕಂ/ಪಹಣಿ/ವಿವಾದ/06/2015–16 ದಿ. 4.3.16

ಉಪಸ್ಥಿತರು :– ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಕೆ.ಮಣ್ಣು ಬಸಪ್ಪ ತಂದೆ ಗುಡುದಪ್ಪ | ಶ್ರೀ ಕುರಿ ನಿಂಗಪ್ಪ |
| ಗ್ರಾಮ : ಸಕ್ರಿಹಳ್ಳಿ H/O | ಗುಡುದಪ್ಪ |
| ಸೊನ್ನ | ಸೊನ್ನ |

**ವಿಷಯ :– ಸೊನ್ನ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 312/ಎ ವಿಸ್ತೀರ್ಣ 1–25 ಎಕರೆ ಜಮೀನು ಪವತಿ ವಾರಸು ಪ್ರಕಾರ ಹಕ್ಕುಬದಲಾವಣೆ ಕುರಿತು ದಾಖಲಾದ ಪ್ರಯುಕ್ತ ವಿಚಾರಣೆ**

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಸೊನ್ನ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 312/ಎ ವಿಸ್ತೀರ್ಣ 1–25 ಎಕರೆ ಜಮೀನು ವಾದಿಗಳು ಪವತಿ ವಾರಸು ಪ್ರಕಾರ ಹಕ್ಕು ಬದಲಾವಣೆಗಾಗಿ ನಿಗದಿತ ನಮೂನೆಯೊಂದಿಗೆ ತಾಲೂಕಾ ಭೂಮಿ ಕೇಂದ್ರಕ್ಕೆ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಈ ಪ್ರಕಾರ ಭೂಮಿ ಕೇಂದ್ರದಲ್ಲಿ ದಾಖಲಾಗಿ ನಮೂನೆ 12 ಹಾಗೂ ನೋಟೀಸು ನಮೀನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ, ಹೋಬಳಿ ಇವರ ದ್ವಾರ ಗ್ರಾಮ ಲೆಕ್ಕಾಧಿಕಾರಿ ಸೊನ್ನ ಇವರು ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಲಾಗಿ ಪ್ರತಿವಾದಿಗಳು ತಮ್ಮ ಲಿಖಿತ ತಕರಾರನ್ನು ಭೂಮಿ ಕೇಂದ್ರದಲ್ಲಿ ಸ್ವೀಕೃತಿ ಸಂಖ್ಯೆ/8094/2014–15 ರಂತೆ ದಾಖಲು ಮಾಡಿರುತ್ತಾರೆ. ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವು ಈ ನ್ಯಾಯಾಲಯದಲ್ಲಿ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 10/07/2015 ರಿಂದ ವಿಚಾರಣೆ ಪ್ರಾರಂಭಿಸುತ್ತಾ ದಿನಾಂಕ: 04/03/2016 ರವರೆಗೆ ನಡೆಸಲಾಯಿತು. ಪ್ರಥಮ ವಾಯಿದ ದಿವಸ ಕೆ.ಮಣ್ಣು ಬಸಪ್ಪ ವಾದಿ ಹಾಗೂ ಪ್ರತಿವಾದಿ ಕುರಿ ನಿಂಗಪ್ಪ

15/03/16

K. ಮಣ್ಣು ಬಸಪ್ಪ.

ಹಾಜರಾಗಿದ್ದು ಆನಂತರ ವಾದಿಗಳು ಸತತವಾಗಿ ಗೈರು ಹಾಜರಾಗಿರುತ್ತಾರೆ. ಆ ತರುವಾಯ ತಾಯಿ ಕರಿಬಸಮ್ಮ ಒಂದು ಬಾರಿ ಹಾಜರಾಗಿರುತ್ತಾರೆ. ಆನಂತರ ವಾದಿ ಪ್ರತಿವಾದಿಗಳು ಈರ್ವರೂ ಗೈರು ಹಾಜರಾಗಿರುತ್ತಾರೆ. ಮತ್ತು ಪ್ರಕರಣದಲ್ಲಿ ಲಭ್ಯವಿರುವ ಎರೆಡು ಒಪ್ಪಿಗೆ ಪತ್ರಗಳನ್ನು ಪರಿಶೀಲಿಸಲಾಗಿ ವಂಶವೃಕ್ಷದಲ್ಲಿ ವ್ಯತ್ಯಾಸವಾಗಿರುವುದು ಕಂಡು ಬರುತ್ತದೆ. ಹಾಗೂ ಪ್ರಕರಣದಲ್ಲಿ ವಾದಿ ಹಾಗೂ ಪ್ರತಿವಾದಿಗಳಿಗೆ ಇಚ್ಛಾಶಕ್ತಿ ಇಲ್ಲದಿರುವುದು ಸಹ ಕಂಡು ಬರುತ್ತದೆ. ಆದ್ದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಸೊನ್ನ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 312/ಎ ವಿಸ್ತೀರ್ಣ 1-25 ಎಕರೆ ಜಮೀನಿನ ಪವತಿ ಅರ್ಜಿಯನ್ನು ಗೈರು ಮಂಜೂರು ಮಾಡಿ ಆದೇಶಿಸಿದೆ. ಈ ಆದೇಶವನ್ನು ತೆರದ ನ್ಯಾಯಾಲಯದಲ್ಲಿ ದಿನಾಂಕ: 4.3.16 ರಂದು ಘೋಷಿಸಲಾಗಿದೆ.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ಹಂಪಸಾಗರ

ಉಪತಹಶೀಲ್ದಾರರು
ನಾಡಕಛೇರಿ
ಹಂಪಸಾಗರ

ಪ್ರತಿಗಳು :

1) ವಾದಿ + ಪ್ರತಿವಾದಿಗಳು
2) ಭೂಮಿ ಕೇಂದ್ರ, ತಾಲೂಕು, ಕಛೇರಿ, ಹಗರಿಬೊಮ್ಮನಹಳ್ಳಿ
3) ಹೆಚ್ಚುವರಿ ಪ್ರತಿ ಕಡತಕ್ಕೆ